ಕರ್ನಾಟಕ ವಿಧಾನಸಭೆ

ಬುಧವಾರ 14ನೇ ಫೆಬ್ರವರಿ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 11.26 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಧರಣಿ

ವಿಷಯ: ವಿಧಾನಪರಿಷತ್ತು ಸಭಾಪತಿ ಸ್ಥಾನಕ್ಕೆ ಚುನಾವಣೆ ನಡೆಸುವಂತೆ ಸದಸ್ಯರಿಂದ ಧರಣಿ.

(ಸದನ ಪ್ರಾರಂಭವಾದಾಗ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಘೋಷಣೆ ಕೂಗುತ್ತಾ ಧರಣಿಯಲ್ಲಿ ನಿರತರಾಗಿದ್ದರು)

ಶ್ರೀ ವಾಟಾಳ್ ನಾಗರಾಜ್: ಅದಕ್ಕಿಂತ ಮುಂಚೆ ಇವರೆ ಬಾವಿಗೆ ಬೀಳುತ್ತಿದ್ದಾರಲ್ಲಾ ಏಕೆ?

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು: ಇಲ್ಲಿಗೆ ಬಂದು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು statement ಮಾಡಿದರು. ಇವತ್ತು ಮಧ್ಯಾಹ್ನದ ಒಳಗಡೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ವಿಚಾರವನ್ನು ತಿಳಿಸುತ್ತೇನೆಂದು ಹೇಳಿದ್ದಾರೆ. ಅದನ್ನು ತಾವುಗಳು ಒಪ್ಪಿಕೊಂಡಿದ್ದೀರಿ. ಆ ಕಾರಣದಿಂದ Parliament Affairs Minister statement ಮಾಡುವವರೆಗೆ ಈ ಸದನವನ್ನು ನಡೆಸುವುದಕ್ಕೆ ತಾವು ಸಹಕಾರವನ್ನು ಕೊಡಬೇಕು. ಅವರು statement ಮಾಡುವಾಗ ತಾವು ಒಪ್ಪಿಕೊಳ್ಳಲಿಲ್ಲವೆ? ಅವರು ಹೇಳುತ್ತೇವೆಂದು ಹೇಳಿದರು.

ಶ್ರೀ ಬಸವರಾಜ್ ಹೊರಟ್ಟಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ನೀವು ಏನು ಮಾಡಿದ್ದೀರಿ? ಇವರು ಇದ್ದಾಗಲೂ ಚುನಾವಣೆ ಮಾಡಲಿಲ್ಲ. ಅದನ್ನೆ ಈಗ ಮಾಡಿರುವುದು.

ಅಧ್ಯಕ್ಷರು: ವಾದ ಮಾಡುವುದು ಸರಿಯಲ್ಲ.

ಶ್ರೀ ಬಸವರಾಜ್ ಹೊರಟ್ಟಿ: ಇವರು ಮಾನ್ಯ ಸುದರ್ಶನ್‌ರವರ ಅವಧಿ 11 ತಿಂಗಳು ಇದ್ದಾಗ ಅದನ್ನು 13 ತಿಂಗಳಿಗೆ ಮುಂದೂಡಿದ್ದೀರಿ. ಆವಾಗಲೂ majority ಇತ್ತು. ಚುನಾವಣೆ ಮಾಡುವುದು ....

(ಗೊಂದಲ)

ಅಧ್ಯಕ್ಷರು: ಆಯಿತು. Question Hour ನಡೆಸುವುದಕ್ಕೆ ತಾವುಗಳೆಲ್ಲರೂ ಸಹಕರಿಸಿ.

ಶ್ರೀ ಬಸವರಾಜ್ ಹೊರಟ್ಟಿ: ಚುನಾವಣೆ ಮಾಡುವುದಕ್ಕೆ ಬರುವುದಿಲ್ಲ. ಚುನಾವಣೆಯನ್ನು ಸರ್ಕಾರ ಮಾಡುತ್ತದೆ. ನೀವು ಹೇಗೆ ಚುನಾವಣೆಯನ್ನು ಮಾಡಿದ್ದೀರಿ?

ಅಧ್ಯಕ್ಷರು: ಆಯಿತು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರವನ್ನು ಮಾಡೋಣ. ಪ್ರಶ್ನೋತ್ತರವು ಆದ ನಂತರ ಅಷ್ಟರೊಳಗಡೆ Parliament affairs Minister ರವರು ಬರುತ್ತಾರೆ.

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್: ಈಗ ಪ್ರಶ್ನೋತ್ತರ ನಡೆಯಬೇಕು.

ಅಧ್ಯಕ್ಷರು: ಆಯಿತು. ಅಲ್ಲಿಯವರೆವಿಗೆ ಸಹಕರಿಸಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಶ್ರೀ ಎಂ.ಪಿ.ವೆಂಕಟೇಶ್: ಮಾನ್ಯ ಡಿ.ಕೆ.ಶಿವಕುಮಾರ್‌ರವರ ದರ್ಬಾರ್‌ನಲ್ಲಿ ಕೌನ್ಸಿಲ್ ನಡೆದಿದ್ದು 16 ತಿಂಗಳು ನಿಮ್ಮದೇ ದರ್ಬಾರ್, ಇಲ್ಲಿ ಏಕೆ ಭಾಷಣ ಮಾಡುತ್ತೀರಿ? ಇಲ್ಲಿ ಮಾನ್ಯ ಡಿ.ಕೆ.ಶಿವಕುಮಾರ್‌ರವರ ದರ್ಬಾರ್, ಇಲ್ಲಿ ನಿಮ್ಮದೆ ಕಾರುಬಾರು ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು: ಪ್ರಶ್ನೋತ್ತರವನ್ನು ಆರಂಭ ಮಾಡೋಣ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಪಿ.ವೆಂಕಟೇಶ್: ಈಗ ಏಕೆ ಇಲ್ಲಿಗೆ ಬರುತ್ತೀರಿ? ನಿಮ್ಮ ಆಟವು ಜನರಿಗೆ ಗೊತ್ತಾಗಬೇಕೆ? ಹಿಂದೆ ನೀವು ಮಾಡಿರುವುದು ಹಾಗೂ ನಿಮ್ಮ ಆಟ ಗೊತ್ತಾಗಬೇಕೆ? ಹಿಂದೆ ಇವರುಗಳು ಹೇಗೆ ನಡೆದುಕೊಂಡಿದ್ದಾರೆ ಎಂಬುದು ಜನರಿಗೆ ಅದು ಗೊತ್ತಿಲ್ಲವೆ?

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಬಾವಿಯೊಳಗಡೆ ನಿಂತುಕೊಂಡು ಮಾತನಾಡುವುದು ಯಾವ ನ್ಯಾಯ?

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚುನಾವಣೆ ನಡೆಯಬೇಕೆನ್ನುವುದರ ಬಗ್ಗೆ ಇದರಲ್ಲಿ ಯಾರ ಭಿನ್ನಾಭಿಪ್ರಾಯವು ಇಲ್ಲ. ನಿನ್ನೆಯು ಕೂಡ ಆ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಚುನಾವಣೆಯನ್ನು ಮಾಡಬೇಕಾಗಿತ್ತು, ಅದನ್ನು ಮಾಡಲಿಲ್ಲ. ಯಾವುದೋ ಕಾರಣಗಳಿಂದ ಚುನಾವಣೆಯು ಆಗಿಲ್ಲ. ಆದರೆ ಇವತ್ತಿನ ವ್ಯವಸ್ಥೆಯಲ್ಲಿ ಆತ್ಮ ಸಾಕ್ಷಿಗಿಂತಲೂ ಹೆಚ್ಚಾಗಿ ನಾವು ಕಾನೂನಿಗೆ ಅನುಗುಣವಾಗಿ ಚುನಾವಣೆಯನ್ನು ನಡೆಸಬೇಕಾಗುತ್ತದೆ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಧ್ಯಾಹ್ನದ ಒಳಗಾಗಿ ಮಾತನಾಡಿ ಸಭೆಗೆ ತಿಳಿಸುತ್ತೇನೆಂದು ಹೇಳಿದ್ದೇನೆ. ಆ ಕಾರಣಕ್ಕಾಗಿಯೇ ತಾವುಗಳೆಲ್ಲರೂ ಹಿರಿಯರು ಇದ್ದೀರಿ. ತಾವೆಲ್ಲರೂ ಕೂಡ ಬಾವಿಯಲ್ಲಿ ಬೀಳತಕ್ಕದ್ದು ಸರಿಯಾದುದಲ್ಲವೆನ್ನುವ ಕಾರಣಕ್ಕಾಗಿಯೇ, ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಧ್ಯಾಹ್ನದವರೆಗಾದರೂ ಕೂಡ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

(ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಶ್ರೀ ಎಂ.ಪಿ. ಪ್ರಕಾಶ್: ಆ ವಿಚಾರದಲ್ಲಿ ....(ಗೊಂದಲ)

ಶ್ರೀ ಎನ್.ಚಲುವರಾಯಸ್ವಾಮಿ(ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್‌ರವರು ಎರಡು ಬಾರಿ ಮಂತ್ರಿಯಾಗಿದ್ದುಕೊಂಡು ಸರ್ಕಾರವನ್ನು ನಡೆಸಿದ್ದಾರೆ. ಮಾನ್ಯ ಶಿವಕುಮಾರ್‌ರವರು ಸಚಿವರಾಗಿದ್ದಾಗ ಉಪಸಭಾಪತಿಯವರಾದ ಸುದರ್ಶನ್‌ರವರನ್ನು ಸಭಾಪತಿಯಾಗಿ ಮುಂದುವರಿಸಿರುವಂತಹ situation ಇದೆ. ಪ್ರಜಾಪ್ರಭುತ್ವದ ಕಗ್ಗೊಲೆ ಆಗಿದ್ದರೆ ಅದು ಮಾನ್ಯ ಶಿವಕುಮಾರ್‌ರವರಿಂದಲೇ ಹಾಗೂ ಕಾಂಗ್ರೆಸ್ಸಿನಿಂದ, ಬೇರೆ ಯಾವ ಪಕ್ಷದವರು ಆಡಳಿತ ಮಾಡುವಂತಹ ಸಂದರ್ಭದಲ್ಲಿ ಆಗಿಲ್ಲ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಎರಡು ಬಾರಿ ಇದೇ ರೀತಿಯಾಗಿ ನಡೆದುಕೊಂಡಿದ್ದೀರಿ. ನಮಗೆ ನೀವು ಹೊಸದಾಗಿ ಪಾಠವನ್ನು ಕಲಿಸಬೇಕಾಗಿಲ್ಲ. 40 ವರ್ಷ ಆಡಳಿತವನ್ನು ಮಾಡಿರುವಂತಹ ಮತ್ತು

ಅನುಭವವಿರುವಂತಹ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದಂತಹ ಸಂದರ್ಭದಲ್ಲಿ ಮಾಡಿರತಕ್ಕಂತಹ ಎಲ್ಲವೂ ಸಹ ದಾಖಲೆಗಳಲ್ಲಿ ಇದೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರವನ್ನು ಆರಂಭ ಮಾಡೋಣ. ಎಲ್ಲರೂ ಸಹಕರಿಸಿ.

(ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ನಾನು ಹೇಳುತ್ತೇನೆಂದು ಮಾನ್ಯ ಪ್ರಕಾಶ್‌ರವರು ಹೇಳಿದ್ದಾರೆ. ಅವರು statement ಮಾಡುವವರೆಗೆ ಕಲಾಪಗಳನ್ನು ನಡೆಸೋಣ. ಈಗ ಪ್ರಶ್ನೋತ್ತರವನ್ನು ಆರಂಭ ಮಾಡೋಣ. ದಯಮಾಡಿ ಎಲ್ಲರೂ ಸಹಕರಿಸಿ.

ಶ್ರೀ ಎಂ.ಪಿ.ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಇವರದೆ ದರ್ಬಾರ್. ಇವರದೇ ಆಟ. ಇವರಿಗೆ ಏನು ಕೆಲಸವಿಲ್ಲ

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ನಿಂತುಕೊಂಡು ಧಿಕ್ಕಾರ ಕೂಗುತ್ತಿದ್ದರು.)

ಶ್ರೀ ಎಂ.ಪಿ.ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಇವರನ್ನು ಹೊರಗೆ ಹಾಕಿ.

(ಗೊಂದಲ)

ಅಧ್ಯಕ್ಷರು: ಈ ತರಹ ಮಾಡಿದರೆ ಹೇಗೆ? ಈಗ ನೀವು ಸದನದ ಬಾವಿಗೆ ಬಂದಿದ್ದೀರಿ. ನಿಮಗೆ ಕಲಾಪಗಳನ್ನು ಅಡ್ಡಿ ಮಾಡುವುದಕ್ಕೆ ಅಧಿಕಾರವಿಲ್ಲ. ಆದ್ದರಿಂದ ನೀವು ಸುಮ್ಮನೆ ನಿಂತುಕೊಳ್ಳಿ.

ಶ್ರೀ ಎಂ.ಪಿ.ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಇವರನ್ನು ಹೊರಗೆ ಹಾಕಬೇಕು.

ಅಧ್ಯಕ್ಷರು: ನೀವು ಮಾಡುತ್ತಿರುವುದು ಪ್ರಜಾಪ್ರಭುತ್ವವೇ?

(ಗೊಂದಲ)

ಅಧ್ಯಕ್ಷರು: ಇಷ್ಟಬಂದಂತೆ ಮಾಡುವುದಾದರೆ ಹೇಗೆ? ಅಡ್ಡಿಯನ್ನು ಮಾಡಬೇಡಿ. ನೀವು ಸದನದ ಬಾವಿಯೊಳಗಡೆ ಬಂದಿದ್ದೀರಿ. ಸುಮ್ಮನೆ ನಿಂತುಕೊಳ್ಳಿ. ಪ್ರಶ್ನೋತ್ತರವನ್ನು ಆರಂಭ ಮಾಡೋಣ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು: ನೀವುಗಳು ಅರ್ಧಗಂಟೆಯವರೆಗಾದರೂ ಹೊರಗಡೆ ಕುಳಿತುಕೊಳ್ಳಿ. ನೀವು ಹಾಗೂ ಮಾಡಲ್ಲ, ಹೀಗೂ ಮಾಡಲ್ಲ, ಏನು what is the reaction of the people? ಅದನ್ನು ನೀವು ಅರ್ಥಮಾಡಿಕೊಂಡಿದ್ದೀರಾ? ಅವರ ಪರವಾಗಿ ಅವರು ಸರಿ. ನಿಮ್ಮ ಪರವಾಗಿ ನೀವು ಸರಿ. ಇದರಿಂದ ಜನರು suffer ಆಗುತ್ತಾರೆ.

ಶ್ರೀ ಎಂ.ಪಿ.ವೆಂಕಟೇಶ್: ಇವರನ್ನು ಹೊರಗೆ ಹಾಕಿ.

(ಈ ಹಂತದಲ್ಲಿ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಎಂ.ಪಿ. ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಇವರನ್ನು ಹೊರಗೆ ಹಾಕಿ.

ಅಧ್ಯಕ್ಷರು: ನೀವು ಮಾಡುವುದು ಸರಿಯಲ್ಲ. ತಾವು ದಯಮಾಡಿ ತಮ್ಮ ಆಸನಗಳಿಗೆ ಹೋಗಬೇಕು. ಪ್ರಶ್ನೋತ್ತರವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇಲ್ಲದಿದ್ದರೆ ನೀವುಗಳು ಸುಮ್ಮನೆ ನಿಂತುಕೊಳ್ಳಿ. ಗಲಾಟೆಯನ್ನು ಮಾಡಬೇಡಿ.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು 30 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು 11 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು 30 ನಿಮಿಷದ ನಂತರ ಸಮಾವೇಶಗೊಳ್ಳುತ್ತದೆ)

ಸದನವು ಪುನಃ ಮಧ್ಯಾಹ್ನ 12 ಗಂಟೆ 20 ನಿಮಿಷಕ್ಕೆ ಪುನರಾರಂಭಗೊಂಡಿತು.

ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠದಲ್ಲಿದ್ದರು

ಅಧ್ಯಕ್ಷರು: ಈಗ ಪ್ರಶ್ನೋತ್ತರ ಆರಂಭ ಮಾಡೋಣ. ದಯಮಾಡಿ ಎಲ್ಲ ಸಹಕರಿಸಿ.

[ಕಾಂಗ್ರೆಸ್ ಸದಸ್ಯರು ಧರಣಿಯಲ್ಲಿದ್ದರು, ಬಾವಿಯಿಂದಲೇ ಮಾತನಾಡುತ್ತಿದ್ದರು]

ಅಧ್ಯಕ್ಷರು: ದಯಮಾಡಿ ಕೇಳಿ, ನೆನ್ನೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇವತ್ತಿನ ಮಧ್ಯಾಹ್ನದ ವೇಳೆಗೆ ನಾನು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಿ ಹೇಳುತ್ತೇನೆ ಎಂದಿದ್ದರು. ನೀವೆಲ್ಲ ಕೇಳಿ ಒಪ್ಪಿಕೊಂಡಿರಿ. ಆದ್ದರಿಂದ ಮಧ್ಯಾಹ್ನದವರೆಗಾದರೂ ಕಲಾಪ ನಡೆಯಲು

ಅವಕಾಶ ಕೊಡಿ. ಅನಂತರ ಅವರು ಹೇಳಿಕೆ ಮಾಡುತ್ತಾರೆ, ಅದು ನಿಮಗೆ ತೃಪ್ತಿ ತರದಿದ್ದರೆ ಮುಂದಿನದು ನಿಮಗೆ ಬಿಟ್ಟಿದ್ದು.

ಶ್ರೀ ಎಂ.ಪಿ. ವೆಂಕಟೇಶ್: ಅಧ್ಯಕ್ಷರೆ ಇವರಿಗೆ ಸದನ ನಡೆಸುವುದಕ್ಕೆ ಇಷ್ಟವಿಲ್ಲ. ಇದೆಲ್ಲ ಪ್ರಚಾರಕ್ಕಾಗಿ ಮಾಡುತ್ತಿರುವುದು, ದಯವಿಟ್ಟು ಇವರನ್ನೂ ಹೊರಗೆ ಹಾಕಿ. ಆಡಬಾರದ ಆಟವೆಲ್ಲ ಆಡಿದ್ದಾರೆ. ಮೊದಲು ಇವರನ್ನು ಹೊರಗೆ ಹಾಕಿ.

ಅಧ್ಯಕ್ಷರು: ಒಬ್ಬರಿಗೊಬ್ಬರು ಕೆಸರು ಎರಚಿಕೊಂಡು ಮಾತನಾಡುವುದು ಯಾರಿಗೂ ಇದು ಗೌರವ ತರುವುದಿಲ್ಲ, ಸದನ ನಡೆಸಲು ಅವಕಾಶ ಕೊಡುತ್ತೀರೋ ಇಲ್ಲವೋ?

[ಧರಣಿಯಲ್ಲಿದ್ದ ಮಾನ್ಯ ಸದಸ್ಯರು ಇಲ್ಲ ಎಂದು ಕೈಯಾಡಿಸುವರು]

ಅಧ್ಯಕ್ಷರು: ಆಯಿತು. ಈಗ ಸದನವನ್ನು 2.30ಕ್ಕೆ ಮುಂದೂಡಲಾಗಿದೆ.

[ಸದನವು ಮಧ್ಯಾಹ್ನ 12 ಗಂಟೆ 23 ನಿಮಿಷಕ್ಕೆ ಮುಂದೂಡಲ್ಪಟ್ಟಿತು]

(ಸದನವು ಭೋಜನ ವಿರಾಮದ ನಂತರ ಪುನ: 3.39 ಗಂಟೆಗೆ ಸಮಾವೇಶಗೊಂಡಿತು)

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

2. ಪ್ರಕಟಣೆ

ವಿಷಯ: (ಅ) ಮಾನ್ಯ ಸದಸ್ಯರಾದ ತನ್ವೀರ್‌ಸೇಠ್‌ರವರನ್ನು ಮೈಸೂರಿನಲ್ಲಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ.

ದಿನಾಂಕ 11.02.07ರಂದು ವಿಧಾನ ಸಭಾ ಸದಸ್ಯರಾದ ಶ್ರೀ ತನ್ವೀರ್ ಸೇಠ್ ಅವರನ್ನು ಮೈಸೂರಿನಲ್ಲಿ ಕಾವೇರಿ ನ್ಯಾಯಾಧಿಕರಣದ ತೀರ್ಪನ್ನು ಪ್ರತಿಭಟಿಸಿ ರಸ್ತೆ ತಡೆ ಉಂಟು ಮಾಡಿದ್ದಕ್ಕಾಗಿ ಕರ್ನಾಟಕ ಪೊಲೀಸ್ ಕಾಯಿದೆ ಕಲಂ 71ರ ಮೇರೆಗೆ ಬೆಳಿಗ್ಗೆ 11.20 ಗಂಟೆಗೆ ಬಂಧಿಸಿ, ಅದೇ ದಿನ ಅಪರಾಹ್ನ 12.00 ಗಂಟೆಗೆ ಬಿಡುಗಡೆ ಮಾಡಲಾಯಿತು ಎಂದು ಮೈಸೂರು ನಗರ ಪೊಲೀಸ್ ಕಮಿಷನರ್ ಅವರು ತಿಳಿಸಿರುತ್ತಾರೆ.

(ಆ) ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರನ್ನು ರಾಜಭವನದ ಮುಂಭಾಗದಲ್ಲಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ. ಮಾನ್ಯ ಸದಸ್ಯರಾದ ಪಿ.ಸಿ. ಮೋಹನ್‌ರವರನ್ನು ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ.